ಕರ್ನಾಟಕ ವಿಧಾನ ಸಭೆ

ಮಂಗಳವಾರ 27ನೇ ನವೆಂಬರ್ 1990 ಮಾರ್ಗಶಿರ 6, ಶಕ 1912

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11–05 ಗಂಟೆಗೆ

ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು

ಸಂತಾಪ ಸೂಚನೆ

ಅಧ್ಯಕ್ಷರು:

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ರಂಗಪ್ಪ ಅವರು ದಿನಾಂಕ: 26–11–1990 ರಂದು ನಿಧನ ಹೊಂದಿದರೆಂದು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀಯುತರು 1945 ರಿಂದ 50ರ ವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ನಂತರ 1955 ರಿಂದ 1956, 1956 ರಿಂದ 1962 ಹಾಗೂ 1972 ರಿಂದ 1978ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. 1956ರಲ್ಲಿ ವಿಧಾನ ಪರಿಷತ್ತಿನ ಉಪ ಮುಖ್ಯ ಸಚೇತಕರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಸಮಾಜದ ವಿವಿಧ ಕ್ಷೇತ್ರದಲ್ಲಿ ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾದ ಸೇವೆ ಸಲ್ಲಿಸುರುವುದು ಗಮನಾರ್ಹವಾಗಿದೆ. ಸ್ವಾತಂತ್ರ್ಯ ಚಳುವಳಿ ಹಾಗೂ 1942ರ ಅರಣ್ಯ ಸತ್ಯಾಗ್ರಹ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕೀರ್ತಿ ಶ್ರೀಯುತರದಾಗಿರುತ್ತದೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಒಂದು ನಿಮಿಷ ಮೌನ ಆಚರಿಸಿದರು)

ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದ ಶಾಲೆಗಳು

416. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾಗಿರುವ ಶಾಲೆಗಳಿಗಾಗಿ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಇವುಗಳ ನಿರ್ಮಾಣವು ಕಾರ್ಯ ಪೂರ್ಣವಾಗಿದೆಯೆ ನಿರ್ಮಾಣ ಕಾರ್ಯ ಪ್ರಾರಂಭವಾಗದಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು?

ಇ) ಈ ನಿರ್ಮಾಣ ಕಳಪೆ ಕೆಲಸವಾಗಿದೆಯೆಂಬ ಕುರಿತು ಸರ್ಕಾರಕ್ಕೆ ದೂರುಗಳು ಬಂದಿವೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀಮಾನ್ಯ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) ಮಂಜೂರಾದ ಶಾಲಾ ಕೊಠಡಿಗಳ ಸಂಖ್ಯೆ

ಮೊದಲನೇ ಹಂತ	90	ಕೊಠಡಿಗಳು
ಎರಡನೇ ಹಂತ	165	ಕೊಠಡಿಗಳು
ಒಟ್ಟು	255	ಕೊಠಡಿಗಳು

ಆ) ಮಂಜೂರಾದ ಶಾಲಾ ಕೊಠಡಿಗಳ

ಒಟ್ಟು ಸಂಖ್ಯೆ	255
ನಿರ್ಮಾಣ ಕಾರ್ಯ ಪೂರ್ಣಗೊಂಡಿರುವ ಕೊಠಡಿಗಳ ಸಂಖ್ಯೆ	113
ನಿರ್ಮಾಣವಾಗುತ್ತಿರುವ ಶಾಲಾ ಕೊಠಡಿಗಳ ಸಂಖ್ಯೆ	104
ನಿರ್ಮಾಣ ಕಾರ್ಯವನ್ನು ಪ್ರಾರಂಭಿಸ ಬೇಕಾಗಿರುವ ಶಾಲಾ ಕೊಠಡಿಗಳ ಸಂಖ್ಯೆ	38

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾಗಿರುವ ಶಾಲೆಗಳ ಕೊಠಡಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 255 ಎಂದು ಹೇಳಿದ್ದಾರೆ. ಆದರಲ್ಲಿ ಎಷ್ಟು ನಿರ್ಮಾಣವಾಗಿದೆ ಮತ್ತು ಎಷ್ಟು ನಿರ್ಮಾಣವಾಗಲಿಲ್ಲ ಎಂದು ಕೇಳಿದ್ದಕ್ಕೆ 113 ಇಷ್ಟರಲ್ಲಿ ಆಗಿದೆ. 104 ಪ್ರಾರಂಭವಾಗಿದೆ. 38 ಆಗಲಿಲ್ಲವೆಂದು ಹೇಳಿದ್ದಾರೆ. ಆದರೆ ಈ 104 ಪ್ರಾರಂಭವಾಗಿದೆ ಎಂದು ಹೇಳುವಂತಾದ್ದು ಮತ್ತು ಈ 38 ಆಗಲಿಲ್ಲ ಎಂದು ಹೇಳುವಂತಾದ್ದು ಎರಡೂ ಒಂದೇ; ಆದ್ದರಿಂದ ಇಷ್ಟು ವಿಳಂಬವಾಗುವುದಕ್ಕೆ ಕಾರಣ ಏನೆಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, 104 ಅಂತೂ ಈಗ ಪ್ರಾರಂಭವಾಗಿದೆ. 38 ಮಾತ್ರ ಪ್ರಾರಂಭವಾಗದಕ್ಕಂಥ ಹಂತದಲ್ಲಿ ಇದೆ. ಏಕೆಂದರೆ, ಸಿಮೆಂಟ್ ಕೊರತೆ ಇದ್ದ ಕಾರಣ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಈಗಾಗಲೇ ಡೆಪ್ಯೂಟಿ ಕಮಿಷನರ್‌ರವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ಸಿಮೆಂಟ್ ಸಿಕ್ಕ ತಕ್ಷಣ ಈ ಕೆಲಸ ಪ್ರಾರಂಭ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ, ಈಗ ಆಗಿರತಕ್ಕಂಥ 113 ಕೊಠಡಿಗಳ ಕೆಲಸ ಚೆನ್ನಾಗಿಲ್ಲವೆಂದು, ಕಳಪೆ ಕೆಲಸವೆಂದು ಹೇಳಿ ಎಲ್ಲಾ ಕಡೆಯಿಂದ ದೂರುಗಳು ಬಂದಿವೆ. ಅದನ್ನು ಕೇಳಿದ್ದಕ್ಕೆ, ಕಳಪೆ ಕೆಲಸವಲ್ಲವೆಂದು ಹೇಳಿದ್ದಾರೆ. ಇನ್ನು ಮುಂದೆ ಕಳಪೆ ಅಲ್ಲದ ಹಾಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ! ಎಂದು ಕೇಳಿದ್ದಕ್ಕೆ ಉದ್ಭವಿಸುವುದಿಲ್ಲವೆಂದು ಉತ್ತರ ಹೇಳುತ್ತಾರೆ. ಬಹುಪಾಲು ಜನ ಅದು ಒಳ್ಳೆಯದಲ್ಲ; ಕಳಪೆ ಕೆಲಸವಾಗಿದೆಯೆಂದು ಹೇಳುತ್ತಾರೆ. ಇದಮ್ಮ ಏನಾದರೂ ಪರೀಕ್ಷೆ ಮಾಡಿಸುತ್ತೀರಾ ಸ್ವಾಮಿ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಕೆಲಸಗಳನ್ನು ಜಿಲ್ಲಾಪರಿಷತ್ತಿನ ಮೂಲಕ ನಾವು ಮಾಡಿಸುತ್ತಿದ್ದೇವೆ. ಇದರ ಬಗ್ಗೆ ಇಲ್ಲಿಯವರೆಗೆ ಯಾವ ಕಂಪ್ಲೇಂಟ್ ಬಂದಿಲ್ಲ. ಈಗ ತಾವು ಹೇಳುತ್ತಿದ್ದೀರಿ, ಇದರ ಬಗ್ಗೆ ಸೂಕ್ತ ಆದೇಶ ಕೊಡುತ್ತೇನೆ. ಎಲ್ಲೆಲ್ಲಿ ಕಳಪೆ ಕೆಲಸವಾಗಿದೆಯೋ ಅದನ್ನು ಒಳ್ಳೆಯ ರೀತಿಯಿಂದ ಮಾಡುವುದಕ್ಕೆ ಅಥವಾ ದುರಸ್ತಿ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದು ಸೀಮಿತವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕೇಳಿದ್ದಾರೆ. ಈ ಕಪ್ಪು ಹಲಗೆ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ನೂರಾರು ಕಂಪ್ಲೇಂಟ್ಸ್ ಇವೆ. ಈ ಕೆಲಸವನ್ನು ಲ್ಯಾಂಡ್ ಆರ್ಮಿನವರು ಮತ್ತು ಬೇರೆ ಇಲಾಖೆಗಳ ಮೂಲಕ ಮಾಡಿಸಿರುತ್ತಾರೆ. ಈ ಕೆಲಸಗಳು ಕಳಪೆ ಮಟ್ಟದಲ್ಲಿ ಆಗಿವೆ. ಇವುಗಳ ಬಗ್ಗೆ ಅನೇಕ ದೂರುಗಳು ಬಂದಿವೆ. ಕೆಳದರ್ಜೆ ಹೆಂಚುಗಳನ್ನು ತಂದುಹಾಕಿದ್ದಾರೆ. ಅನೇಕ ಕಡೆ ಈ ಕಟ್ಟಡಗಳು ಬಿದ್ದುಹೋಗಿವೆ. ಅದಕ್ಕೋಸ್ಕರ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ, ಏನು ಕಳಪೆ ಕೆಲಸವನ್ನು ಮಾಡಿಸಿರುತ್ತಾರೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಮತ್ತೆ ಈ ರೀತಿಯ ಕೆಲಸವಾಗದಂತೆ ಮಾಡಬೇಕು. ಸಂಬಂಧಪಟ್ಟ ಇಲಾಖೆಯವರು ಹಣವನ್ನು ದುರುಪಯೋಗ ಮಾಡಿದ್ದಾರೆ. ಇವರಿಗೆ ಹೇಳುವವರು, ಕೇಳುವವರು ಯಾರೂ ಇಲ್ಲ ಎಂದು ವರ್ತನೆ ಮಾಡಿದ್ದಾರೆ. ದಯಮಾಡಿ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಬೇಕು. ಇದು ಇಡೀ ರಾಜ್ಯದಲ್ಲಿರುವಂಥ ಸಮಸ್ಯೆ. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇದರ ಬಗ್ಗೆ ಅನೇಕ ಸಲ ಚರ್ಚೆಯಾಯಿತು. ಅನೇಕ ಕಂಪ್ಲೇಂಟ್ಸ್‌ನ್ನು ನಾವು ಬರವಣಿಗೆಯಲ್ಲಿ ಕೊಟ್ಟಿದ್ದೇವೆ. ಆದ್ದರಿಂದ ಇದರ ಬಗ್ಗೆ ತನಿಖೆ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಸಲಹೆ ಕೊಟ್ಟಿದ್ದಾರೋ, ಅದನ್ನು ಪರಿಶೀಲಿಸುತ್ತೇವೆ. ಲ್ಯಾಂಡ್ ಆರ್ಮಿಯವರು ಕಟ್ಟಿರುವ ಕಡೆಗಳಲ್ಲಿ ಕೆಲವು ಕಡೆ ಕಳಪೆ ಕೆಲಸ ಆಗಿದೆ. ಆದರೆ, ಈಗ ಸ್ಪೆಸಿಫಿಕ್ ಆಗಿ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಪ್ರಶ್ನೆ ಸೀಮಿತವಾಗಿರುವುದರಿಂದ ಬೇರೆ ಜಿಲ್ಲೆಗಳ ಮಾಹಿತಿಗಳು ನನ್ನ ಹತ್ತಿರ ಇಲ್ಲ. ಆದರೂ ತಾವು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು, ಸರಿಯಾದ ಇನ್‌ಸ್ಟ್ರಕ್ಷನ್ ಕೊಡುತ್ತೇನೆ.

ಶ್ರೀ ಎನ್.ಜಿ. ನಾಯಕ್ : ನನ್ನ ಕ್ಷೇತ್ರದಲ್ಲೂ ಲ್ಯಾಂಡ್ ಆರ್ಮಿಯವರು ಕಟ್ಟಿರುವ ಕಟ್ಟಡಗಳ ಕೆಲಸ ಕಳಪೆಯಾಗಿದೆ. ಇದನ್ನೂ ಸರಿ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಶ್ರೀಮತಿ ಮೋಟಮ್ಮ : ಈ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಕಟ್ಟಿರುವ ಕಟ್ಟಡಗಳ ಸಮಸ್ಯೆ ಬರೀ ಒಂದು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಕಡೆಯೂ ಇದೇ ಸಮಸ್ಯೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಕಟ್ಟಡಗಳು ಮಂಜೂರಾದ ಕಡೆ ಕಟ್ಟದೆ ಬೇರೆ ಕಡೆ ಕಟ್ಟಿದ್ದಾರೆ.

ರೇಷ್ಮೆ ವಿನಿಮಯ ಕೇಂದ್ರದ ಬಗ್ಗೆ

ಅಧ್ಯಕ್ಷರು : ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಇದು ಸೀಮಿತವಾಗಿದೆ.

441. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ): ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಚ್ಚಾ ರೇಷ್ಮೆ ನೂಲಿನ ಪ್ರಮಾಣವೆಷ್ಟು?

ಆ) ರಾಜ್ಯದಲ್ಲಿ ಕಚ್ಚಾ ರೇಷ್ಮೆ ನೂಲು ಪ್ರತಿದಿನ ರೇಷ್ಮೆ ವಿನಿಮಯ ಕೇಂದ್ರಕ್ಕೆ ಎಷ್ಟು ಟನ್ ಬರುತ್ತದೆ.?

ಇ) ರಾಜ್ಯದ ಕಚ್ಚಾ ರೇಷ್ಮೆ ನೂಲು ರೇಷ್ಮೆ ವಿನಿಮಯ ಕೇಂದ್ರಕ್ಕೆ ರೇಷ್ಮೆ ನೂಲು ಬರದೆ ಹೊರಗಡೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಅದನ್ನು ತಡೆಯುವುದಕ್ಕೆ ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ರಾಜ್ಯ ರೇಷ್ಮೆ ಸಚಿವರು):–

ಅ) 6076 ಮೆಟ್ರಿಕ್ ಟನ್‌ಗಳು

ಆ) ಸುಮಾರು 10 ಟನ್‌ಗಳು

ಇ) ಹೌದು

ಈ) ಇಲಾಖೆಯ ಕಾಯಿದೆ ಜಾರಿ ವಿಭಾಗದವರಿದಂ ಕರ್ನಾಟಕ ರೇಷ್ಮೆ ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ವಿತರಣೆ ಮತ್ತು ಮಾರಾಟ) ನಿಯಮಾವಳಿ – 1959 ರೀತ್ಯಾ ರೇಷ್ಮೆ ವರ್ತಕರ ರೇಷ್ಮೆ ಹುರಿಮಾರಾಟಗಾರರ ಮತ್ತು ನೇಕಾರರ ಲೆಕ್ಕ ಪತ್ರಗಳನ್ನು ತನಿಖೆ ಮತ್ತು ತಾಳೆ ನೋಡುವ ಕ್ರಮ ತೀವ್ರತೆರದಲ್ಲಿ ಕೈಗೊಂಡಿದೆ.